ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

UNIVERSITY OF HORTICULTURAL SCIENCES, BAGALKOTE

ದಿನಾಂಕ 01–10–2019 ರಂದು ಬೆಳಿಗ್ಗೆ 11.00 ಗಂಟೆಗೆ ವ್ಯವಸ್ಥಾಪನಾ ಮಂಡಳಿ ಸಭಾಂಗಣ, ತೋವಿವಿ, ಬಾಗಲಕೋಟೆ ಇಲ್ಲಿ ಜರುಗಿದ ವ್ಯವಸ್ಥಾಪನಾ ಮಂಡಳಿಯ 52ನೇ ಸಭೆಯ ನಡುವಳಿಗಳು.

**MINUTES OF 52ND MEETING OF THE BOARD OF MANAGEMENT HELD ON 01-10-2019 AT 11.00 A.M. IN BOARD ROOM, UHS, BAGALKOTE.**

ಹಾಜರಿದ್ದ ಸದಸ್ಯರು

**Members present**

| | | | |
|---|---|---|---|
| 1. | ಡಾ. ಕೆ. ಎಂ. ಇಂದಿರೇಶ<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ,<br>ತೋವಿವಿ, ಬಾಗಲಕೋಟೆ. | : | ಅಧ್ಯಕ್ಷರು |
| | **Dr. K. M. Indiresh**<br>Vice-Chancellor and Chairman<br>Board of Management, UHS, Bagalkote. | : | Chairman |
| 2. | ಡಾ. ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ.<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸದಸ್ಯರು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ,<br>ತೋಟಗಾರಿಕೆ ಇಲಾಖೆ, ಎಂ. ಎಸ್. ಬಿಲ್ಡಿಂಗ್, ಬೆಂಗಳೂರು–560 001. | : | ಸದಸ್ಯರು |
| | **Dr. Rajender Kumar Kataria,** I.A.S.,<br>Principal Secretary GOK and Member,<br>Board of Management, UHS, Bagalkote,<br>Department of Horticulture,<br>M.S. Building, Bengaluru-560001. | : | Member |
| 3. | ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ<br>ವಿಧಾನ ಪರಿಷತ್ ಸದಸ್ಯರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ<br>ತೂಪಲ್ಲಿ ಗ್ರಾಮ, ಜೆ. ತಿಮ್ಮಸಂದ್ರ ಪೋಸ್ಟ್,<br>ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. | : | ಸದಸ್ಯರು |
| | **Sri R. Chowda Reddy Thoopalli**<br>Member of Legislative Council and Member<br>Board of Management, UHS, Bagalkote<br>Tupalli Village, J. Timmasandra Post<br>Srinivaspur Taluka, Kolar District. | : | Member |
| 4. | ಶ್ರೀ ಬಿ. ವೆಂಕಟೇಶ, ಭಾ.ಅ.ಸೇ.,<br>ತೋಟಗಾರಿಕೆ ನಿರ್ದೇಶಕರು ಮತ್ತು ಸದಸ್ಯರು, ವ್ಯವಸ್ಥಾಪನಾ ಮಂಡಳಿ,<br>ತೋವಿವಿ, ಬಾಗಲಕೋಟೆ, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್,<br>ಬೆಂಗಳೂರು–560004. | : | ಸದಸ್ಯರು |
| | **Sri. B. Venkatesh,** I.F.S.,<br>Director of Horticulture and Member,<br>Board of Management, UHS Bagalkote,<br>Dept. of Horticulture, Lalbagh,<br>Bangalore-560004. | : | Member |

| | | | |
|---|---|---|---|
| 5. | ಶ್ರೀ ಶಂಕರಪ್ಪ ಬಸಪ್ಪ ಮಳಲಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ<br>ಮು:ಪೋ: ಉತೂರು, ತಾ: ಮುಧೋಳ, ಜಿ: ಬಾಗಲಕೋಟೆ | : | ಸದಸ್ಯರು |
| | **Sri. Shankarappa Basappa Malali**<br>Member,Board of Management,UHS, Bagalkote<br>Mu:Po: Utturu, Mudhol Taluka, Dist: Bagalkote | : | Member |
| 6. | ಶ್ರೀ ಎಸ್. ಎನ್. ಮಂಜುನಾಥಗೌಡ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ ದಳಸನೂರು,<br>ಮದನಹಳ್ಳಿ ಪಂಚಾಯಿತು-563126, ತಾಲ್ಲೂಕು ಮತ್ತು ಜಿಲ್ಲೆ: ಕೋಲಾರ. | : | ಸದಸ್ಯರು |
| | **Sri S. N. Manjunathagowda**<br>Member, Board of Management, UHS, Bagalkote<br>Shettymadamangala Village,<br>Velagalaburre Post, Via Dalasanur, Madanahally<br>Panchayath-563126, Tq & Dist : Kolar | : | Member |
| 6. | ಶ್ರೀ ಆರ್. ಎಂ. ನಾಗೇಶ್<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ<br>ನಂ. 25, ಜುಬಿಲಿ ಶಾಲೆ ಹತ್ತಿರ, ಪಾಪರೆಡ್ಡಿಪಾಳ್ಯ, ನಾಗರಬಾವಿ,<br>ಬೆಂಗಳೂರು-560 072. | : | ಸದಸ್ಯರು |
| | **Sri R. M. Nagesh**<br>Member, Board of Management,UHS,Bagalkote<br>No. 25, Near Jubilee School, Papareddy Palya,<br>Nagarbhavi, Bengaluru-560 072. | : | Member |
| 7. | ಶ್ರೀ ಯೋಗಿರಾಜ ಬಿ. ಪಾಟೀಲ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ<br>ಸಂ. 142, "ಸದ್ಗುರು", 5ನೇ ಕ್ರಾಸ್, ಕುಸುಮನಗರ ಮುಖ್ಯ ರಸ್ತೆ, ವೈದ್ಯ<br>ಮಠ ಸಂಕೀರ್ಣ ಹಿಂದುಗಡೆ, ಧಾರವಾಡ-580008. | : | ಸದಸ್ಯರು |
| | **Dr. Yogiraj B. Patil**<br>Member, Board of Management, UHS, Bagalkot<br>No. 142, "Sadguru", 5th Cross<br>Kusumnagar Main Road, Backside of Vaidya<br>Math Complex, Dharwad-580008. | : | Member |
| 8. | ಶ್ರೀಮತಿ ಕಸ್ತೂರಿ ತವನಪ್ಪ ಅಷ್ಟಗಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ<br>ಶಿವನಗರ, ಸವದತ್ತಿ ರಸ್ತೆ, ಮುರುಘಾ ಮಠದ ಹತ್ತಿರ,<br>ಧಾರವಾಡ - 581208. | : | ಸದಸ್ಯರು |
| | **Smt. Kasturi Tavanappa Astagi**<br>Member, Board of Management, UHS,<br>Bagalkote, Shivanagar, Savadatti Road,<br>Near Muruga Math, Dharwad-581208. | : | Member |

| | | | |
|---|---|---|---|
| 9. | ಡಾ. ಟಿ. ಜಾನಕಿರಾಮ<br>ಗೌರವಾನ್ವಿತ ಸದಸ್ಯರು, ವ್ಯವಸ್ಥಾಪನ ಮಂಡಳಿ,<br>ತೋವಿವಿ, ಬಾಗಲಕೋಟೆ & ಸಹಾಯಕ<br>ಮಹಾನಿರ್ದೇಶಕರು (ತೋಟಗಾರಿಕೆ ವಿಜ್ಞಾನ-I) & ಭಾರತೀಯ ಕೃಷಿ<br>ಅನುಸಂಧಾನ ಪರಿಷತ್, ಕೊಠಡಿ ಸಂ. 423, ಕೆಎಬಿ– II,<br>ಪುಸಾ, ನವದೆಹಲಿ–110 012. | : | ಸದಸ್ಯರು |
| | **Dr T. Janakiram**<br>Member, Board of Management, UHS, Bagalkote<br>& Asstt. Director General (Hort. Sci. - I) &<br>Indian Council of Agricultural Research<br>Room No. 423, KAB-II, Pusa, New Delhi 110 012. | : | Member |
| 10. | ಡಾ. ಕೆ. ಎಮ್. ಇಂದಿರೇಶ<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ. | : | ಸದಸ್ಯರು |
| | **Dr. K. M. Indiresh**<br>Director of Education and Member<br>Board of Management, UHS, Bagalkote. | : | Member |
| 11. | ಡಾ. ಟಿ. ಬಿ. ಅಳ್ಳೊಳ್ಳಿ<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟೆ. | : | ಸದಸ್ಯ ಕಾರ್ಯದರ್ಶಿಗಳು |
| | **Dr. T. B. Allolli**<br>Registrar & Member-Secretary,<br>Board of Management, UHS, Bagalkote. | : | Member Secretary |

ಆರಂಭದಲ್ಲಿ, ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು ವ್ಯವಸ್ಥಾಪನ ಮಂಡಳಿಯ 52ನೇ ಸಭೆಗೆ ಅಧ್ಯಕ್ಷರು ಹಾಗೂ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಕುಲಸಚಿವರು ಇವರು ಗೌರವಾನ್ವಿತ ಕುಲಪತಿಗಳು ಹಾಗೂ ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು. ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳ ಮೇಲೆ ಸುದೀರ್ಘ ಚರ್ಚೆಗಳನ್ನು ಕೈಗೆತ್ತಿಕೊಂಡು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, the Registrar and Member Secretary welcomed Chairman and members of the Board of Management to the 52nd meeting. The Registrar requested the Hon'ble Vice Chancellor and Chairman to chair the meeting and to conduct the deliberations as per the agenda for discussion. After the detailed deliberations and discussions on the agenda subjects, the following decisions were resolved during the Board meeting.

| | |
|---|---|
| ಕಾರ್ಯಸೂಚಿ ಸಂ. 1 | **ದಿನಾಂಕ 28.06.2019 ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 51ನೇ ಸಭೆಯ ನಡುವಳಿಗಳ ಧೃಢೀಕರಣ.** |
| | ಚರ್ಚೆ ಮತ್ತು ಠರಾವು :<br>ವ್ಯವಸ್ಥಾಪನಾ ಮಂಡಳಿಯ 51ನೇ ಸಭೆಯ ನಡುವಳಿಗಳ ಮೇಲೆ ಕೆಲವು ಗೌರವಾನ್ವಿತ ಸದ್ಯರುಗಳಿಂದ ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಮಂಡಿಸಿದರು. ಆಕ್ಷೇಪಣೆಗಳನ್ನು ಒಂದೊಂದಾಗಿ ವಿವರವಾದ ಚರ್ಚೆಯ ನಂತರ, ದಿನಾಂಕ 28.06.2019 ರಂದು ಜರುಗಿದ ವ್ಯವಸ್ಥಾಪನಾ ಮಂಡಳಿಯ 51ನೇ ಸಭೆಯ ನಡುವಳಿಗಳನ್ನು ಮಂಡಳಿಯು ದೃಢೀಕರಿಸಿತು. ಗೌರವಾನ್ವಿತ ಸದಸ್ಯರಾದ ಶ್ರೀ ಆರ್. ಚೌಡಾ ರೆಡ್ಡಿ ತೂಪಲ್ಲಿರವರು ಹಿಂದಿನ ಮಂಡಳಿ ಸಭೆಯಲ್ಲಿ ಭಾಗವಹಿಸಿದ್ದಕ್ಕೆ ಯಾವುದೇ ರೀತಿಯ ಭತ್ಯೆ, ಪ್ರಯಾಣ ಭತ್ಯೆ / ದಿನಭತ್ಯೆ ತೆಗೆದುಕೊಂಡಿರುವುದಿಲ್ಲ, ಹೀಗಾಗಿ ದಿನಾಂಕ 21-09-2019 ರಂದು ಬರೆದ ಪತ್ರಕ್ಕಾಗಿ ಅಧ್ಯಕ್ಷರು ವಿಷಾಧಿಸಿದರು. ವಿವರವಾದ ಚರ್ಚೆಗಳ ನಂತರ, ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಇವರು ದಿನಾಂಕ 21-09-2019 ರಂದು ತೋವಿವಿ, ಬಾಗಲಕೋಟೆಯ ವ್ಯವಸ್ಥಾಪನಾ ಮಂಡಳಿಯ 51ನೇ ಸಭೆಯ ನಡುವಳಿಗಳ ಮೇಲಿನ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ, ಅಧಿಕಾರೇತರ ಸದಸ್ಯರುಗಳಿಗೆ ಬರೆದಿರುವ ಪತ್ರವನ್ನು ಹಿಂಪಡೆಯಲು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿದರು.<br>(ಕ್ರಮ: ಕುಲಸಚಿವರು) |
| **Item No.01** | **Confirmation of the minutes of the 51st meeting of the Board of Management held on 28.06.2019.** |
| | **Discussion and Resolution :**<br>The comments received from some of the Hon'ble Members on the minutes of 51st meeting of Board of Management were presented in the meeting by the Member Secretary. After going through the comments one by one and detailed discussion, Board confirmed the minutes of the 51st meeting of Board of Management held on 28.06.2019. The Chairman regretted for letter written to Hon'ble Member Sri. R. Chowda Reddy vide dated 21-09-2019, as he did not take sitting charges and TA/DA for attending the previous Board Meeting. After thorough discussion, Secretary, Dept. of Horticulture, GOK suggested the University to withdraw the letter written by the University vide dated 21.09.2019 to the non-official members, with respect to comments on the minutes of the 51st meeting of BOM, UHS, Bagalkote.<br>**(Action: Registrar)** |

| | |
|---|---|
| ಕಾರ್ಯಸೂಚಿ ಸಂ. 1 (ಎ) | ದಿನಾಂಕ 28-06-2019 ರಂದು ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 51ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮ. |
| | **ಚರ್ಚೆ ಮತ್ತು ಠರಾವು :**<br>ಕೆಲವು ಗೌರವಾನ್ವಿತ ಸದಸ್ಯರು ಕ್ರಮ ಕೈಗೊಂಡ ವರದಿಯ ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಸ್ಪಷ್ಟೀಕರಣ ಕೇಳಿದರು. ದಿನಾಂಕ 28-6-2019 ರಂದು ಜರುಗಿದ ವ್ಯವಸ್ಥಾಪನಾ ಮಂಡಳಿಯ 51ನೇ ಸಭೆಯ ನಡುವಳಿಗಳ ಮೇಲೆ ಮಾನ್ಯ ಸದಸ್ಯರುಗಳಿಂದ ಸ್ವೀಕೃತಗೊಂಡ ಆಕ್ಷೇಪಣೆಗಳಿಂದಾಗಿ ಕ್ರಮ ಕೈಗೊಂಡ ವರದಿಯನ್ನು ಮೊದಲೇ ಸಿದ್ಧಪಡಿಸಲಾಗಿಲ್ಲ ಎಂದು ಅಧ್ಯಕ್ಷರು ತಿಳಿಸಿದರು. ವಿಶ್ವವಿದ್ಯಾಲಯವು ತೆಗೆದುಕೊಂಡ ಕ್ರಮಗಳನ್ನು ಮಂಡಳಿಯು ಅವಲೋಕಿಸಿತು ಮತ್ತು ಅದರ ಪ್ರಗತಿಗೆ ತನ್ನ ಒಪ್ಪಿಗೆಯನ್ನು ವ್ಯಕ್ತಪಡಿಸಿತು. ಕೈಗೊಂಡ ಕ್ರಮಗಳಿಗೆ ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು.<br>(ಕ್ರಮ: ಕುಲಸಚಿವರು) |
| **Item No.01 (a)** | **Action taken report on the minutes of the 51st meeting of Board of Management held on 28-06-2019.** |
| | **Discussion and Resolution :**<br>Some of the Hon'ble members sought clarification for delay in circulation of action taken report. Chairman informed that, action taken report was not prepared earlier, due to comments received from the Hon'ble members on the minutes of 51st Meeting of Board of Management held on 28-06-2019. The Board perused the action taken report and expressed its consent over the progress made. The Board accorded its approval for the actions taken.<br>**(Action: Registrar)** |
| ಕಾರ್ಯಸೂಚಿ ಸಂ. 2 | ಸಿ.ಎ.ಎಸ್.2006 ರ ಅಡಿಯಲ್ಲಿ ಶಿಕ್ಷಕರಿಗೆ ಉನ್ನತೀಕರಿಸಲು ಅನುಮೋದನೆಗಾಗಿ ಕುರಿತು. |
| ಕಾರ್ಯಸೂಚಿ ಸಂ. 3 | ಸಿ.ಎ.ಎಸ್.2006 ರ ಅಡಿಯಲ್ಲಿ ಶಿಕ್ಷಕರನ್ನು ಪ್ರಾಧ್ಯಾಪಕರಿಂದ ಪ್ರಾಧ್ಯಾಪಕ (ಹೆಚ್‌ಎಜಿ)ಗೆ ಉನ್ನತೀಕರಿಸಲು ಅನುಮೋದನೆಗಾಗಿ ಕುರಿತು. |
| ಕಾರ್ಯಸೂಚಿ ಸಂ. 4 | ಸೇವಾ ಸಿಬ್ಬಂದಿಗಳ ಪದೋನ್ನತಿ (ಉಪ ಆಡಳಿತಾಧಿಕಾರಿಗಳು, ಉಪ ಹಣಕಾಸು ನಿಯಂತ್ರಣಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಅಭಿಯಂತರರು ಹುದ್ದೆಗಳಿಗೆ) |
| | **ಚರ್ಚೆ ಮತ್ತು ಠರಾವು :**<br>ಗೌರವಾನ್ವಿತ ರಾಜ್ಯಪಾಲರ ಸಚಿವಾಲಯದಿಂದ ಕೃವಿವಿ, ಧಾರವಾಡಕ್ಕೆ ನೀಡಿರುವ ಪತ್ರ ಸಂ. ಜಿಎಸ್ 07 ಎಯುಡಿ 2013, ದಿನಾಂಕ 17-03-2013 ರ ಪ್ರಕಾರ ಪ್ರಭಾರಿ ಕುಲಪತಿಗಳು ನೇಮಕಾತಿಗಳಿಗೆ |

| | |
|---|---|
| | ಸಂಬಂಧಿಸಿದಂತೆ ನಿರ್ಧಾರಗಳನ್ನು ತೆಗೆದುಕೊಳ್ಳಬಾರದು ಎಂದು ಹೇಳಿರುವುದರಿಂದ, ಈ ತರಹದ ನಿರ್ಧಾರಗಳನ್ನು ತೆಗೆದುಕೊಳ್ಳಬಹುದೇ ಎಂದು ಕೆಲವು ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದಕ್ಕೆ ಅಧ್ಯಕ್ಷರು ಸಿಎಎಸ್ ಪದೋನ್ನತಿಗಳು ವಾಡಿಕೆಯಾಗಿದ್ದು, ಸಂಪೂರ್ಣ ವೈಯಕ್ತಿಕ ಮತ್ತು ಯಾವುದೇ ರೋಸ್ಟರ್ ಒಳಗೊಂಡಿಲ್ಲ ಮತ್ತು ಸಿಎಎಸ್ ಪದೋನ್ನತಿಯ ಮೂಲಕ ಕೇವಲ ಹುದ್ದೆಯನ್ನು ನವೀಕರಿಸಲಾಗುತ್ತದೆ ಎಂದು ಸಭೆಗೆ ತಿಳಿಸಿದರು. ಆದಾಗ್ಯೂ, ಸದಸ್ಯರು ಇದಕ್ಕೆ ಒಪ್ಪಲಿಲ್ಲ ಮತ್ತು ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಇವರು ಈ ನಿಟ್ಟಿನಲ್ಲಿ ಸಂಬಂಧಿತ ದಾಖಲೆಗಳು / ಸ್ಪಷ್ಟೀಕರಣವನ್ನು ಪಡೆದು ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಲು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿದರು<br>**(ಕ್ರಮ: ಕುಲಸಚಿವರು)** |
| **Item No.02** | **Approval for up-gradation of teachers under CAS-2006 Scheme.** |
| **Item No.03** | **Approval for up-gradation of teachers from Professor to Professor (HAG) under CAS-2006 Scheme.** |
| **Item No.4** | **Promotion of Service Personnel (to the post of Deputy Administrative Officer, Deputy Comptroller and Executive Engineer)** |
| | **Discussion & Resolution :**<br>The item No. 2, 3, and 4 were deferred by the Board of Management to the next meeting, as some of the members expressed their concern whether in-charge Vice Chancellor can take such decisions as per the letter issued by the Hon'ble Governors Secretariat to UAS, Dharwad vide No. GS 07 AUD 2013 dated 17-06-2013, which states that, acting Vice-Chancellor cannot take decisions regarding recruitment / appointments. The Chairman informed that, CAS promotions are routine, pure personal and no roster is involved and through CAS promotion, only the post is upgraded. However, the members did not agree for that and Secretary to Government, Dept. of Horticulture, GOK suggested the University to get relevant documents / clarification in this regard and put up in the next meeting of Board of Management.<br>**(Action: Registrar)** |

| ಕಾರ್ಯಸೂಚಿ ಸಂ. 5 | ತೋವಿವಿ, ಬಾಗಲಕೋಟೆಯಿಂದ ಕೃತೋವಿವಿ, ಶಿವಮೊಗ್ಗಕ್ಕೆ ತೈನಾತೀಕರಣದ **(REPATRIATION)** ಮೇಲೆ ಶಿಕ್ಷಕರನ್ನು ವರ್ಗಾವಣೆ ಮಾಡುವ ಕುರಿತು. |
|---|---|
| | **ಚರ್ಚೆ ಮತ್ತು ಠರಾವು :**<br>ಈ ವಿಷಯದ ಕುರಿತು ವಿವರವಾದ ಚರ್ಚೆ ನಡೆದು, ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಇವರು ದಿನಾಂಕ 12-6-2019 ರಂದು ಈ ಕುರಿತು ಹೊರಡಿಸಿದ ಸರ್ಕಾರದ ಆದೇಶವನ್ನು ಪರಿಶೀಲಿಸಲಾಗುವುದು ಎಂದು ಹೇಳಿದರು. ಮುಂದುವರೆದು, ಡಾ. ವೈ. ಬಿ. ಪಾಟೀಲರವರು ಶ್ರೀ ರುದ್ರ ನಾಯಕ್, ಹಿರಿಯ ಸಹಾಯಕರು ಇವರನ್ನು ತೋವಿವಿ, ಬಾಗಲಕೋಟೆಯಿಂದ ಕೃತೋವಿವಿ, ಶಿವಮೊಗ್ಗಕ್ಕೆ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆಯದೇ ತೈನಾತೀಕಾರಣದ ವರ್ಗಾವಣೆ ಮಾಡಿ ಮೇಲೆ ಬಿಡುಗಡೆ ಮಾಡಿರುವುದಕ್ಕೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು. ಇದಕ್ಕೆ ಅಧ್ಯಕ್ಷರು, ತೋವಿವಿ ಅಧಿನಿಯಮ, 2009ರ ನಿಯಮ 62 ರ ಪ್ರಕಾರ, ಬೋಧಕೇತರ ಸಿಬ್ಬಂದಿಯ "ಎ" ವೃಂದದ ಸಿಬ್ಬಂದಿಗಳ ವೇತನ ಶ್ರೇಣಿಯದ್ದಕ್ಕಿಂದ ಕಡಿಮೆ ವೇತನಶ್ರೇಣಿಯನ್ನು ಹೊಂದಿರುವ ಹುದ್ದೆಗಳ ಆಡಳಿತಾತ್ಮಕ ತೀರ್ಮಾನಗಳು ಕುಲಪತಿಗಳು ತೆಗೆದುಕೊಳ್ಳಲು ಅಧಿಕಾರ ಇರುವುದರಿಂದ, ಶ್ರೀ ರುದ್ರ ನಾಯಕ್, ಹಿರಿಯ ಸಹಾಯಕರು ಇವರು ಗ್ರೂಪ್ "ಸಿ" ಸಿಬ್ಬಂದಿ ಇರುವುದರಿಂದ ಮತ್ತು ವಿಶ್ವವಿದ್ಯಾಲಯದ ಆದೇಶ ದಿನಾಂಕ 3.8.2019 ರನ್ವಯ ಬಿಡುಗಡೆಗೊಳಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದು, ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬೆಂಗಳೂರು ಇವರು ಕಾರ್ಯಸೂಚಿಯನ್ನು ಮುಂದೂಡಲು ಸೂಚಿಸಿದರು.<br>(ಕ್ರಮ: ಕುಲಸಚಿವರು) |
| **Item No.5** | **Transfer of teachers from UHS, Bagalkote to UAHS, Shivamogga on repatriation.** |
| | **Discussion & Resolution :**<br>There was detailed deliberation on this issue. The Secretary to Government, Department of Horticulture, GOK expressed his concern about the G.O. issued on 12-6-2019 in this regard and he said that he will examine the G.O. Further, Dr. Y. B. Patil, has objected for relieving Sri. Rudra Naik, Sr. Asst., from UHSB to UASH, Shivamogga on repatriation without the approval of the Board. Chairman told that, as per provision of section 62 of UHS Act, 2009, the Vice-Chancellor is empowered to take administrative decisions in respect of posts lower than the pay scale of Asst. Professor under teaching and "A" group employees |

| | |
|---|---|
| | under non-teaching staff. Further, Secretary to Government, Department of Horticulture, Bengaluru suggested to defer the item. **(Action: Registrar)** |
| ಕಾರ್ಯಸೂಚಿ ಸಂ. 6 | **ಡಾ. ಎ. ಜಿ. ಪಾಟೀಲ, ಸಹಾಯಕ ಪ್ರಾಧ್ಯಾಪಕರು, ತೋಟಗಾರಿಕೆ ಮಹಾವಿದ್ಯಾಲಯ, ಬೀದರ ಇವರು ನಿಲಯಪಾಲಕರಾಗಿ ಪ್ರಭಾರದಲ್ಲಿದ್ದಾಗ ಹಣದ ದುರುಪಯೋಗಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯವು ವಿಧಿಸಿದ ದಂಡನೆಯ ಮರು ಪರಿಶೀಲನೆ ಮಾಡುವ ಕುರಿತು.** |
| | **ಚರ್ಚೆ ಮತ್ತು ಠರಾವು :** ಮಂಡಳಿಯು, ಈ ವಿಷಯವನ್ನು ವಿವರವಾಗಿ ಪರಿಶೀಲಿಸಿತು ಮತ್ತು ವಸತಿ ನಿಲಯದ ಅನುದಾನವನ್ನು ದುರುಪಯೋಗಪಡಿಸಿಕೊಂಡದ್ದಕ್ಕಾಗಿ ವಿಶ್ವವಿದ್ಯಾಲಯದಿಂದ ಶಿಕ್ಷೆಗೆ ಗುರಿಯಾದ ಡಾ. ಎ. ಜಿ. ಪಾಟೀಲ, ಸಹಾಯಕ ಪ್ರಾಧ್ಯಾಪಕರು, ತೋಟಗಾರಿಕೆ ಮಹಾವಿದ್ಯಾಲಯ, ಬೀದರ ಇವರಿಗೆ ಸಂಬಂಧಿಸಿದ ಕಾರ್ಯಸೂಚಿಯನ್ನು ಚರ್ಚಿಸಲಾಯಿತು. ಶಿಸ್ತಿನ ಕ್ರಮವನ್ನು ಪರಿಶೀಲಿಸಿದ ನಂತರ, ಮಂಡಳಿಯು ಹಿಂದಿನ ನಿರ್ಧಾರದ ಪ್ರಕಾರ ಐದರ ಬದಲಾಗಿ ಎರಡು ವೇತನ ಬಡ್ತಿಗಳನ್ನು ಮಾತ್ರ ತಡೆಹಿಡಿಯುವಂತೆ ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. ಈ ನಿರ್ಧಾರವು ಈ ಸಭೆಯ ದಿನಾಂಕದಿಂದ ಅಂದರೆ 01-10-2019 ರಿಂದ ಜಾರಿಗೆ ಬರುತ್ತದೆ. (ಕ್ರಮ: ಆಡಳಿತಾಧಿಕಾರಿಗಳು) |
| **Item No.6** | **Reviewing the University disciplinary action against Dr. A. G. Patil, Assistant Professor, COH, Bidar with regard to misappropriation of money during the period of his holding the charge of Warden.** |
| | **Discussion & Resolution :** The Board went through the item in detail and deliberated the issue of Dr. A. G. Patil, Assistant Professor, COH, Bidar, who has been punished by the University for misappropriation of hostel fund. After reviewing the disciplinary action, Board directed the University to withheld only two increments instead of five as per the earlier decision of the Board. This decision came into effect prospectively from the date of this meeting i.e., 01-10-2019. **(Action: Administrative Officer)** |

| | |
|---|---|
| ಕಾರ್ಯಸೂಚಿ ಸಂ. 7 | ತೋವಿವಿ, ಬಾಗಲಕೋಟದಲ್ಲಿ "ಸಿ" ವೃಂದದ ಹುದ್ದೆಗಳ ನೇಮಕಾತಿಗಾಗಿ ಪರಿಷ್ಕೃತ ಸ್ಕೋರ್ ಕಾರ್ಡ್‌ಗಳನ್ನು ಅಳವಡಿಸಿಕೊಳ್ಳುವುದು. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು ಈ ಪ್ರಸ್ತಾವನೆಯನ್ನು ಪರಿಶೀಲಿಸಿತು ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕರ್ನಾಟಕ ಸರ್ಕಾರವು ಹೊರಡಿಸಿದ ಆದೇಶ ದಿನಾಂಕ 31.12.2015 ರ ಪ್ರಕಾರ ತೋವಿವಿ, ಬಾಗಲಕೋಟೆಯಲ್ಲಿ "ಸಿ" ವೃಂದದ ಹುದ್ದೆಗಳ ನೇಮಕಾತಿಗಾಗಿ ಪರಿಷ್ಕೃತ ಸ್ಕೋರ್ ಕಾರ್ಡ್ ಅಳವಡಿಸಿಕೊಳ್ಳಲು ನಿರ್ಧರಿಸಿತು. ಇದಲ್ಲದೇ, ದಿನಾಂಕ 11-3-2016 ರಂದು ಜರುಗಿದ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ಸಮನ್ವಯ ಸಮಿತಿಯ 23ನೇ ಸಭೆಯ ತೀರ್ಮಾನಕ್ಕೆ ಅನುಗುಣವಾಗಿರುತ್ತದೆ.<br>(ಕ್ರಮ: ಕುಲಸಚಿವರು) |
| **Item No.7** | **Adoption of Revised Score Card for appointment of "C" group posts in UHS, Bagalkote.** |
| | **Discussion & Resolution :**<br>The Board examined the proposal and took decision to adopt revised score card for appointment of "C" group posts in UHS, Bagalkote as per the Order issued by the Department of Personnel and Administrative Reforms, Government of Karnataka vide dated 31.12.2015. Further, this is in accordance with decision of the 23rd meeting of the State Co-Ordination Committee of Farm Universities held on 11-3-2016.<br>**(Action: Registrar)** |
| ಕಾರ್ಯಸೂಚಿ ಸಂ. 8 | ಶ್ರೀ. ಮಲ್ಲಿಕಾರ್ಜುನ ಎನ್. ಬಿರಾದಾರ ಉಪ ಹಣಕಾಸು ನಿಯಂತ್ರಣಾಧಿಕಾರಿಗಳು ಹಾಗೂ ಶ್ರೀಮತಿ.ಜಯಶೀಲ, ಹಿರಿಯ ಸಹಾಯಕರು ಕೃ.ವಿ.ವಿ. ರಾಯಚೂರನಲ್ಲಿ ಇವರುಗಳ ಹೆಚ್ಚುವರಿಯಾಗಿ ಸಲ್ಲಿಸಿದ ಸೇವೆಯನ್ನು ನಿಯೋಜನೆಯ ಅವಧಿಯೆಂದು ಪರಿಗಣಿಸುವ ಕುರಿತು. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು ಕಾರ್ಯಸೂಚಿಯನ್ನು ವಿವರವಾಗಿ ಚರ್ಚಿಸಿತು ಮತ್ತು ಕೃವಿವಿ, ರಾಯಚೂರಿನಲ್ಲಿ ಶ್ರೀ. ಮಲ್ಲಿಕಾರ್ಜುನ ಎನ್. ಬಿರಾದಾರ ಉಪ ಹಣಕಾಸು ನಿಯಂತ್ರಣಾಧಿಕಾರಿಗಳು ದಿನಾಂಕ 1.4.2019 ರಿಂದ 2.5.2019 ಹಾಗೂ ಶ್ರೀಮತಿ.ಜಯಶೀಲ, ಹಿರಿಯ ಸಹಾಯಕರು ದಿನಾಂಕ 1.4.2019 ರಿಂದ 9.4.2019 ಗಳವರೆಗೆ ಹೆಚ್ಚುವರಿಯಾಗಿ ದಿನಾಂಕ ಸಲ್ಲಿಸಿದ ಸೇವೆಗಳ ವಿಸ್ತೃತ ಅವಧಿಯನ್ನು ಪರಿಗಣಿಸಲು ತನ್ನ ಅನುಮೋದನೆಯನ್ನು ನೀಡಿತು. ಮುಂದುವರೆದು, ಮಂಡಳಿಯು ಈ ಕುರಿತು ಆದೇಶ ಹೊರಡಿಸಲು ವಿಶ್ವವಿದ್ಯಾಲಯಕ್ಕೆ ಸೂಚಿಸಿತು.<br>(ಕ್ರಮ: ಆಡಳಿತಾಧಿಕಾರಿಗಳು) |

| | |
|---|---|
| **Item No.8** | **Considering the extended period served at UAS, Raichur on deputation with respect to Sri. M. N. Biradar, Deputy Comptroller and Smt. Jayasheela, Senior Assistant, UHS, Bagalkote.** |
| | **Discussion & Resolution :**<br>Board deliberated the item in detail and accorded its approval for consideration of extended period of their services rendered at UAS, Raichur by both Sri. M. N. Biradar, Deputy Comptroller from 1.4.2019 to 2.5.2019 and Smt. Jayasheela, Senior Assistant, from 1.4.2019 to 9.4.2019. Further, Board directed the University to issue an order in this regard.<br>**(Action: Administrative Officer)** |
| **ಕಾರ್ಯಸೂಚಿ ಸಂ. 9** | **ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರಕ್ಕೆ ಅವಶ್ಯಕವಿರುವ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ತೋವಿವಿ, ಬಾಗಲಕೋಟೆಯ ಬೆಂಗಳೂರಿನ 2.32 ಎಕರೆ ಜಮೀನನ್ನು ಹಸ್ತಾಂತರಿಸಲು ಅನುಮೋದನೆ ನೀಡುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ಪ್ರಸ್ತಾವನೆಯನ್ನು ಪರಿಶೀಲಿಸಿತು. ವಿವರವಾದ ಚರ್ಚೆಗಳ ನಂತರ, ತೋಟಗಾರಿಕೆ ಸಚಿವಾಲಯದ ಪತ್ರ ದಿನಾಂಕ 16.09.2019 ರ ಪ್ರಕಾರ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರಕ್ಕೆ ಸಾಮರ್ಥ್ಯ ವೃದ್ಧಿ ಮತ್ತು ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರಿನ 2.32 ಎಕರೆ ಜಮೀನನ್ನು ಹಸ್ತಾಂತರಿಸಲು ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರಕ್ಕೆ ಸಾಮರ್ಥ್ಯ ವೃದ್ಧಿ ಮತ್ತು ಮೂಲಭೂತ ಸೌಕರ್ಯಗಳನ್ನು ತೋಮವಿ, ಬೆಂಗಳೂರಿನ ಆವರಣದಲ್ಲಿ ನಿರ್ಮಿಸಲು ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ಮಾನದಂಡಗಳ ಪ್ರಕಾರ ತೋವಿವಿ ಇ-ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸುವಂತೆ ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br>(ಕ್ರಮ: ಆಸ್ತಿ ಅಧಿಕಾರಿಗಳು/ನಿರ್ದೇಶಕರು, ರೈ.ಉ.ಸಂ.ಕೇಂದ್ರ, ಬೆಂಗಳೂರು) |
| **Item No.9** | **Approval for sparing of land measuring 2.32 acres of COH, Bengaluru for COE-FPO; for implementation of Project on Capacity Building and Training Facility.** |
| | **Discussion & Resolution :**<br>The Board examined the proposal. After detailed deliberations, Board accorded its approval to spare the land measuring 2.32 acres of COH, Bengaluru for COE-FPO; for establishment of Capacity Building and Training Facility as per the directions |

| | |
|---|---|
| | received from the Horticulture Secretariat, GOK vide letter dated 16.09.2019. Further, Board directed the University to invite tender through UHS e-portal for construction of COE-FPO capacity building and training facility at UHS Bengaluru Campus as per the norms of UHS and KTPP Act.<br>**(Action : Estate Officer/Director, COE-FPO, Bengaluru)** |
| **ಕಾರ್ಯಸೂಚಿ ಸಂ. 10** | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇರ ನೇಮಕಾತಿ ಮಾಡಲು ಪರಿಷ್ಕೃತ ಸ್ಕೋರ್‌ಕಾರ್ಡ್‌ನ್ನು ಅಳವಡಿಸಿಕೊಳ್ಳುವುದು.** |
| | **ಚರ್ಚೆ ಮತ್ತು ಠರಾವು :**<br>ಈ ಕಾರ್ಯಸೂಚಿಯ ಕುರಿತು ಚರ್ಚಿಸುವಾಗ, ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲ ಇವರು ಉತ್ತಮ ಅಭ್ಯರ್ಥಿಯನ್ನು ನೇಮಿಸಲು ಸಂದರ್ಶನಕ್ಕಾಗಿ ಶೇ. 10 ರಷ್ಟು ಅಂಕಗಳನ್ನು ಇಡಲು ಸಲಹೆ ನೀಡಿದರು. ವಿವರವಾದ ಚರ್ಚೆಗಳ ನಂತರ, ಮಂಡಳಿಯು, ಆರಂಭಿಕ ಪರೀಕ್ಷೆಗೆ 40 ಅಂಕಗಳು, ಶೈಕ್ಷಣಿಕ ಅರ್ಹತೆಗೆ 50 ಅಂಕಗಳು ಮತ್ತು ಸಂದರ್ಶನಕ್ಕೆ 10 ಅಂಕಗಳನ್ನು ನಿಗದಿಪಡಿಸುವ ಕುರಿತು ಇತ್ತೀಚೆಗೆ ದಿನಾಂಕ 5.7.2019 ರಂದು ಜರುಗಿದ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ಸಮನ್ವಯ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಅನುಸಾರ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇರ ನೇಮಕಾತಿ ಮಾಡಲು ಪರಿಷ್ಕೃತ ಸ್ಕೋರ್‌ಕಾರ್ಡ್‌ನ್ನು ಅಳವಡಿಸಿಕೊಳ್ಳಲು ತನ್ನ ಅನುಮೋದನೆಯನ್ನು ನೀಡಿತು.<br>**(ಕ್ರಮ: ಕುಲಸಚಿವರು)** |
| **Item No.10** | **Adaptation of Revised Score Card for the recruitment to the entry level posts of Assistant Professor cadre in UHS, Bagalkote.** |
| | **Discussion & Resolution :**<br>During the discussions on this item, Dr. Y. B. Patil, Hon'ble member suggested to have 10% marks for interview, so as appoint good candidate. After detailed deliberations, Board accorded its approval to adopt Revised Score Card for the recruitment to the entry level posts of Assistant Professor cadre in UHS, Bagalkote in accordance with decision taken during recently concluded Meeting of Co-ordination Committee of Farm Universities of the State held on 5.7.2019; during which it was decided to have 40 marks for entrance examination, 50 marks for academic qualification and 10 marks interview performance.<br>**(Action : Registrar)** |

**ಕಾರ್ಯಸೂಚಿ ಸಂ. 11** — **ತೋವಿವಿ, ಬಾಗಲಕೋಟೆಯ 'ಉತ್ತಮ ಶಿಕ್ಷಕ ಪ್ರಶಸ್ತಿ' ನೀಡುವ ನಿಯಮಾವಳಿಗಳ ಮಾರ್ಪಾಡು ಮಾಡುವುದು.**

**ಚರ್ಚೆ ಮತ್ತು ಠರಾವು :**

ಈ ಕಾರ್ಯಸೂಚಿಯನ್ನು ಪರಿಶೀಲಿಸಿ ಮತ್ತು ವಿವರವಾಗಿ ಚರ್ಚಿಸಿ, ಭಾರತೀಯ ಕೃಷಿ ಅನುಸಂದಾನ ಪರಿಷತ್ (ಐಸಿಎಆರ್)ನ ಮಾರ್ಗಸೂಚಿಗಳ ಅನುಸಾರ, ತೋವಿವಿ, ಬಾಗಲಕೋಟೆಯ 'ಉತ್ತಮ ಶಿಕ್ಷಕ ಪ್ರಶಸ್ತಿ' ನೀಡಲು ಮಂಡಳಿಯು, ಐಸಿಎಆರ್‌ದಿಂದ ಅನುದಾನ ಬಿಡುಗಡೆ ಷರತ್ತಿಗೆ ಒಳಪಟ್ಟು ಪ್ರತಿ ವರ್ಷ ಒಬ್ಬ ಶಿಕ್ಷಕರಿಗೆ ರೂ. 50,000/-ಗಳೊಂದಿಗೆ ಪ್ರಶಸ್ತಿ ನೀಡಲು ನಿಯಮಾವಳಿಗಳಲ್ಲಿ ಮಾರ್ಪಾಡು ಮಾಡಲು ತನ್ನ ಅನುಮೋದನೆಯನ್ನು ನೀಡಿತು.

(ಕ್ರಮ: ಕುಲಸಚಿವರು)

**Item No.11** — **Modifications in the guidelines for "Best Teacher Award" in UHS, Bagalkote.**

**Discussion & Resolution :**

This item was discussed at length and after detailed deliberations, Board accorded its approval for modifications in the guidelines for **"Best Teacher Award"** in UHS, Bagalkote to **one teacher** every year with cash prize of Rs. 50,000/- as per the ICAR guidelines, subject to release of ICAR grant.

**(Action : Registrar)**

**ಕಾರ್ಯಸೂಚಿ ಸಂ. 12** — **ತೋವಿವಿ, ಬಾಗಲಕೋಟದಲ್ಲಿ ಬೇರೆ ವಿಶ್ವವಿದ್ಯಾಲಯದ ಅಥವಾ ಸಂಸ್ಥೆಯ ವಿದ್ಯಾರ್ಥಿಗಳಿಗೆ ಅಲ್ಪಾವಧಿಯ ಯೋಜನೆಗಳಡಿಯಲ್ಲಿ ತರಬೇತಿ ಕೈಗೊಳ್ಳಲು ನಿಮಾವಳಿಗಳನ್ನು ರಚಿಸುವ ಬಗ್ಗೆ.**

**ಚರ್ಚೆ ಮತ್ತು ಠರಾವು :**

ಮಂಡಳಿಯ ಪ್ರಸ್ತಾವನೆಯನ್ನು ಪರಿಶೀಲಿಸಿತು ಮತ್ತು ವಿವರವಾಗಿ ಚರ್ಚಿಸಿತು. ಮಂಡಳಿಯು, ತೋವಿವಿ, ಬಾಗಲಕೋಟದಲ್ಲಿ ಬೇರೆ ವಿಶ್ವವಿದ್ಯಾಲಯದ ಅಥವಾ ಸಂಸ್ಥೆಯ ವಿದ್ಯಾರ್ಥಿಗಳಿಗೆ ಅಲ್ಪಾವಧಿಯ ಯೋಜನೆಗಳಡಿಯಲ್ಲಿ ತರಬೇತಿ ಕೈಗೊಳ್ಳಲು ನಿಯಮಾವಳಿಗಳನ್ನು ರಚಿಸಲು ತನ್ನ ಅನುಮೋದನೆಯನ್ನು ನೀಡಿತು. ಹಣಕಾಸಿನ ಪರಿಣಾಮ / ಶುಲ್ಕ ರಚನೆಗೆ ಸಂಬಂಧಿಸಿದ ನಿಯಮಗಳು ಈ ಕೆಳಗಿನಂತಿವೆ;

| Duration of research training/research project | Fee Structure(Rs.) |
|---|---|
| Less than one month | 10,000/- |
| One month to three months | 15,000/- |
| More than three months up to six months | 25,000/- |

(ಕ್ರಮ: ಕುಲಸಚಿವರು)

| Item No.12 | **Formulating regulations for students of other University or Institution or individuals for carrying out short term projects at UHS, Bagalkote.** |
|---|---|
| | **Discussion & Resolution :**<br>Board examined the proposal and deliberated the issue in detail. Further, Board accorded its approval for formulating regulations for students of other University or Institution or individuals for carrying out short term projects at UHS, Bagalkote. The regulations regarding financial involvement / fee structure are as follows: |

| Duration of research training/research project | Fee Structure(Rs.) |
|---|---|
| Less than one month | 10,000/- |
| One month to three months | 15,000/- |
| More than three months up to six months | 25,000/- |

**(Action : Registrar)**

| ಕಾರ್ಯಸೂಚಿ ಸಂ. 13 | ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಸಹಾಯಕರಿಗೆ ಪಿಹೆಚ್.ಡಿ.ಪದವಿಗೆ ಓದಲು ಅಧ್ಯಯನ ರಜೆಯನ್ನು ನೀಡುವುದು. |
|---|---|
| | ಚರ್ಚೆ ಮತ್ತು ಠರಾವು :<br>ಮಂಡಳಿಯ ಪ್ರಸ್ತಾವನೆಯನ್ನು ಪರಿಶೀಲಿಸಿತು ಮತ್ತು ವಿವರವಾಗಿ ಚರ್ಚಿಸಿ. ಮಂಡಳಿಯು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯಿಂದ ಯಾವುದೇ ಆರ್ಥಿಕ ಹೊರೆಯಿಲ್ಲದೇ ಎರಡು ಸೆಮಿಸ್ಟರ್‌ಗಳ ಅವಧಿಗೆ ಅಧ್ಯಯನ ರಜೆಯನ್ನು ವಿಸ್ತರಿಸಲು ತನ್ನ ಅನುಮೋದನೆಯನ್ನು ನೀಡಿತು.<br>(ಕ್ರಮ: ಆಡಳಿತಾಧಿಕಾರಿಗಳು/ಡೀನ್ (ಸ್ನಾತಕೋತ್ತರ) |
| Item No.13 | **Modification of guidelines to extend the Study Leave facility for Technical Assistant cadre employees of the University for prosecuting Ph.D. Programme.** |
| | **Discussion & Resolution :**<br>Board examined the proposal and after deliberations, accorded its approval for extending the STUDY LEAVE facility for a period of two semesters without any financial burden on the part of the University of Horticultural Sciences, Bagalkote.<br>**(Action : Administrative Officer/Dean (PGS)** |

**ಕಾರ್ಯಸೂಚಿ ಸಂ. 14**

**ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರು (ಹಾವೇರಿ)ಯ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ವಿಷಯವನ್ನು ಪರಿವರ್ತನೆ ಮಾಡುವ ಕುರಿತು.**

**ಚರ್ಚೆ ಮತ್ತು ಠರಾವು :**

ಮಂಡಳಿಯ ಈ ಪ್ರಸ್ತಾವನೆಯನ್ನು ಪರಿಶೀಲಿಸಿತು ಮತ್ತು ಈ ವಿಷಯವನ್ನು ವಿವರವಾಗಿ ಚರ್ಚಿಸಿತು; ಮಂಡಳಿಯು, ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರು (ಹಾವೇರಿ)ಯ ಈ ಕೆಳಗಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ವಿಷಯವನ್ನು ಪರಿವರ್ತನೆಯ ಪ್ರಸ್ತಾವನೆಗೆ ತನ್ನ ಅನುಮೋದನೆಯನ್ನು ನೀಡಿತು.

| Sl.No. | Name of the Post | Existing Subject | To be converted Subject |
|---|---|---|---|
| 1 | Asst. Professor | Kannada | Physical Education |
| 2 | Asst. Professor | Agril. Extension | Food Processing Technology |

**(ಕ್ರಮ: ಕುಲಸಚಿವರು)**

**Item No.14**

**Conversion of subject for the post of Assistant Professor at College of Horticulture Engineering and Food Technology (CHEFT), Devihosur (Haveri).**

**Discussion & Resolution :**

This item was discussed at length and after detailed deliberations; Board accorded its approval for conversion of following subjects of the Asst. Professor of College of Horticulture Engineering and Food Technology.

| Sl.No. | Name of the Post | Existing Subject | To be converted Subject |
|---|---|---|---|
| 1 | Asst. Professor | Kannada | Physical Education |
| 2 | Asst. Professor | Agril. Extension | Food Processing Technology |

**(Action : Registrar)**

**ಕಾರ್ಯಸೂಚಿ ಸಂ. 15**

**ಅತ್ಯಧಿಕ ಓಜಿಪಿಎ ಹೊಂದಿರುವ ಬಿ.ಟೆಕ್. (ಎಫ್.ಟಿ.) ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಚಿನ್ನದ ಪದಕವನ್ನು ನೀಡುವುದು.**

**ಚರ್ಚೆ ಮತ್ತು ಠರಾವು :**

ಮಂಡಳಿಯ ಈ ಪ್ರಸ್ತಾವನೆಯನ್ನು ಪರಿಶೀಲಿಸಿತು ಮತ್ತು ಈ ವಿಷಯವನ್ನು ವಿವರವಾಗಿ ಚರ್ಚಿಸಿತು; ಮಂಡಳಿಯು, ಅತ್ಯಧಿಕ ಓಜಿಪಿಎ ಹೊಂದಿರುವ ಬಿ.ಟೆಕ್. (ಎಫ್.ಟಿ.) ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಚಿನ್ನದ ಪದಕವನ್ನು ನೀಡುವ ಪ್ರಸ್ತಾವನೆಗೆ ತನ್ನ ಅನುಮೋದನೆಯನ್ನು ನೀಡಿತು.

**(ಕ್ರಮ: ಕುಲಸಚಿವರು)**

| | |
|---|---|
| **Item No.15** | **Institution of University Gold Medal for B.Tech (FT) students securing highest OGPA.** |
| | **Discussion & Resolution :**<br>This item was discussed at length and after detailed deliberations; Board accorded its approval for Institution of University Gold Medal for B.Tech (FT) students securing highest OGPA.<br>**(Action : Registrar)** |
| **ಕಾರ್ಯಸೂಚಿ ಸಂ. 16** | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ, ಮುಖ್ಯ ಆವರಣದ ಮುಖ್ಯ ಪ್ರವೇಶ ದ್ವಾರ ಕಾಮಗಾರಿಯ ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ನೀಡುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯ ಈ ಪ್ರಸ್ತಾವನೆಯನ್ನು ವಿವರವಾಗಿ ಚರ್ಚಿಸಿ ಮತ್ತು ಸಂಬಂಧಪಟ್ಟ ಇಂಜಿನಿಯರ್‌ಗಳಿಂದ ಸರಿಯಾದ ತಾಂತ್ರಿಕ ಸಮರ್ಥನೆಯ ನಂತರ; ಸದರಿ ಕಾಮಗಾರಿಯ ಪರಿಷ್ಕೃತ ಅಂದಾಜಿನ ಶೇ. 27% ವು ಸರ್ಕಾರದ ಆದೇಶ ಸಂ. PWD 423 FC.-1 2018, ಬೆಂಗಳೂರು ದಿನಾಂಕ 24.09.2018 ರ ಪ್ರಕಾರ ಅನುಮತಿ ಮಿತಿಗಿಂತ ಹೆಚ್ಚು ಇರುವುದರಿಂದ ಇದರ ಬದಲಿಗೆ, ಮೂಲ ಅಂದಾಜು ರೂ. 61,16,627–00 ಗಳ ಶೇ. 20 % ರಷ್ಟು ಪಾವತಿಸಲು ಮಂಡಳಿಯು ನೀಡಿತು.<br>**(ಕ್ರಮ: ಕುಲಸಚಿವರು)** |
| **Item No.16** | **Accordal of approval to the additional and revised cost of main entrance gate at Udyanagiri of University of Horticultural Sciences, Bagalkote.** |
| | **Discussion & Resolution :**<br>This item was discussed at length and after the proper technical justification from the concerned engineers; Board accorded its approval for payment of 20% of the original estimate of Rs. 61,16,627-00 of the said works, instead of 27% in the revised estimate, which is above the permissible limit as per the Government Order vide No. PWD 423 FC.-1 2018, Bangalore, dated 24.09.2018.<br>**(Action : Estate Officer)** |

| | |
|---|---|
| ಕಾರ್ಯಸೂಚಿ ಸಂ. 17 | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಮುಖ್ಯ ಆವರಣದಲ್ಲಿ ಕ್ರೀಡಾ ಸಂಕೀರ್ಣ ಕಟ್ಟಡ ಕಾಮಗಾರಿಯ ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ನೀಡುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯ ಈ ಪ್ರಸ್ತಾವನೆಯನ್ನು ವಿವರವಾಗಿ ಚರ್ಚಿಸಿ ಮತ್ತು ಸಂಬಂಧಪಟ್ಟ ಇಂಜಿನಿಯರ್‌ಗಳಿಂದ ಸರಿಯಾದ ತಾಂತ್ರಿಕ ಸಮರ್ಥನೆಯ ನಂತರ; ಮಂಡಳಿಯು ಮೊತ್ತ ಪಾವತಿಸಲು ತನ್ನ ಅನುಮೋದನೆಯನ್ನು ನೀಡಿತು. ತೋವಿವಿ, ಬಾಗಲಕೋಟೆಯ ಮುಖ್ಯ ಆವರಣದಲ್ಲಿ ಕ್ರೀಡಾ ಸಂಕೀರ್ಣ ಕಟ್ಟಡ ನಿರ್ಮಾಣದ ಕಾಮಗಾರಿಗೆ ಸಂಬಂಧಿಸಿದಂತೆ, ಪರಿಷ್ಕೃತ ಅಂದಾಜುವು ಸರ್ಕಾರದ ಆದೇಶ ಸಂ. PWD 423 FC.-1 2018, ಬೆಂಗಳೂರು ದಿನಾಂಕ 24.09.2018 ರ ಪ್ರಕಾರ ಮಿತಿಯ ಒಳಗಡೆ ಇರುವುದರಿಂದ, ಮೂಲ ಅಂದಾಜು ರೂ. 6,50,000–00 ಗಳ ಶೇ. 20 % ರಷ್ಟು ಪಾವತಿಸಲು ಮಂಡಳಿಯು ನೀಡಿತು.<br>**(ಕ್ರಮ: ಆಸ್ತಿ ಅಧಿಕಾರಿಗಳು)** |
| **Item No.17** | **Accordal of approval to the additional and revised cost for the work of construction of Sports Complex at UHS, Bagalkote.** |
| | **Discussion & Resolution :**<br>This item was deliberated in detail and after the proper technical justification from the concerned engineers; Board accorded its approval to clear the payments. The revised estimate in respect of works of construction of Sports Complex at UHSB is within 20% of the original estimate of Rs. 6,50,00,000-00 as per the Government Order vide No. PWD 423 FC.-1 2018, Bangalore, dated 24.09.2018.<br>**(Action : Estate Officer)** |
| ಕಾರ್ಯಸೂಚಿ ಸಂ. 18 | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ, ಮುಖ್ಯ ಆವರಣಕ್ಕೆ ಹಾಗೂ ಇತರೆ ಎಲ್ಲ ಮಹಾವಿದ್ಯಾಲಯಳಿಗೆ ವೈ-ಫೈ ಸೌಲಭ್ಯ ಹಾಗೂ ಸಂಬಂಧಿಸಿದ ಕಾರ್ಯಗಳಿಗೆ ಅನುಮೋದನೆ ನೀಡುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯ ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಮತ್ತು ವಿವರವಾಗಿ ಚರ್ಚಿಸಿ, ಸ್ಪಷ್ಟತೆಯ ಕೊರತೆಯಿಂದಾಗಿ ಮಂಡಳಿಯು ಈ ಪ್ರಸ್ತಾವನೆಯನ್ನು ಪರಿಗಣಿಸಿರುವುದಿಲ್ಲ. ಮುಂದುವರೆದು, ಶ್ರೀ ಬಿ. ವೆಂಕಟೇಶ, ತೋಟಗಾರಿಕೆ ನಿರ್ದೇಶಕರು ಇವರು ವೈ-ಫೈ ಸೌಲಭ್ಯ ಹಾಗೂ ಸಂಬಂಧಿಸಿದ ಕಾರ್ಯಗಳಿಗೆ ವಿಶ್ವವಿದ್ಯಾಲಯವು ಸಿದ್ದಪಡಿಸಿದ ಅಂದಾಜುವು ತಾಂತ್ರಿಕವಾಗಿ ಇರುವುದಿಲ್ಲ, ಹಾಗಾಗಿ ಕರ್ನಾಟಕ ಸರ್ಕಾರದ ಇ-ಆಡಳಿತ ಕೋಶಕ್ಕೆ ಸಂಪರ್ಕಿಸಿ ವಿವರವಾದ ಅಂದಾಜು ಪಡೆಯಲು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿದರು.<br>**(ಕ್ರಮ: ಆಸ್ತಿ ಅಧಿಕಾರಿಗಳು)** |

| | |
|---|---|
| **Item No.18** | **Establishment of Wi-Fi enabled facility and other related works for UHS campus & all constituent Colleges of UHS, Bagalkote.** |
| | **Discussion & Resolution :**<br>Board examined the proposal and after detailed deliberations, the proposal was not considered by the Board due to lack of clarity. Further, Hon'ble Member Sri. B. Venkatesh, Director of Horticulture suggested the University to approach the E-governance Cell of GOK to get detail estimates for establishment of Wi-Fi enabled facility, since the estimate prepared by the University is not technical sound enough to accept the same.<br>**(Action : Estate Officer)** |
| **ಕಾರ್ಯಸೂಚಿ ಸಂ. 19** | **ಕೃಷಿ ವಿಶ್ವವಿದ್ಯಾಲಯ, ಬೆಂಗಳೂರುವು ಜೆಕೆವಿಕೆ ಆವರಣದಲ್ಲಿ 107ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ (ಐಎಸ್ಸಿ2020) ಆಯೋಜನೆಗಾಗಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯಿಂದ ಪ್ರಾಯೋಜಿಕತ್ವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯ ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಮತ್ತು ವಿವರವಾದ ಚರ್ಚಿಸಿ ನಂತರ, ಮಂಡಳಿಯು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರವು ಜೆಕೆವಿಕೆ ಆವರಣದಲ್ಲಿ ದಿನಾಂಕ 3 ರಿಂದ 7ನೇ ಜನವರಿ, 2020 ರಂದು ಆಯೋಜಿಸಿರುವ 107ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ (ಐಎಸ್ಸಿ2020) ಗಾಗಿ ರೂ. 5.00 ಲಕ್ಷಗಳನ್ನು ಪ್ರಾಯೋಜಿಕತ್ವ ನೀಡುವ ಪ್ರಸ್ತಾವನೆಗೆ ಅನುಮೋದನೆ ನೀಡಿತು. ಮುಂದುವರೆದು, ಭವಿಷ್ಯದಲ್ಲಿ ವಿಶ್ವವಿದ್ಯಾಲಯದ ಇಂತಹ ಕಾರ್ಯಕ್ರಮಗಳಿಗೆ ಇದೇ ರೀತಿಯ ನೆರವು ಪಡೆಯಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು) |
| **Item No.19** | **Sponsorship from University of Horticultural Sciences, Bagalkote for 107th Indian Science Congress-2020 (ISC2020) to be hosted by University of Agricultural Sciences, Bengaluru at GKVK campus.** |
| | **Discussion & Resolution :**<br>The Board examined the proposal and after detailed deliberations, accorded its approval to sponsor Rs. 5.00 lakhs for 107th Indian Science Congress-2020 (ISC2020) to be hosted by University of Agricultural Sciences, Bengaluru at GKVK campus. Further, Board suggested to University to seek similar support in such events in future.<br>**(Action : Comptroller)** |

| | |
|---|---|
| ಕಾರ್ಯಸೂಚಿ ಸಂ. 20 | ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟೆಗೆ FERMENTER-100 LITERS ಖರೀದಿಗಾಗಿ ಟೆಂಡರ್ ಆಹ್ವಾನಿಸಲು ಅನುಮೋದನೆ ಕುರಿತು. |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ತೋಟಗಾರಿಕೆ ಮಹಾವಿದ್ಯಾಲಯ, ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟೆಗೆ FERMENTER-100 LITERS ಖರೀದಿಗಾಗಿ ಅನುಮೋದನೆ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಯ, ಸದರಿ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು. ಮುಂದುವರೆದು, ಮಂಡಳಿಯು, ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಕರೆಯಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br>(ಕ್ರಮ: ಸಂಶೋಧನಾ ನಿರ್ದೇಶಕರು/ಆಸ್ತಿ ಅಧಿಕಾರಿಗಳು) |
| **Item No.20** | **Approval to invite tender for purchase of Fermenter-100 liters capacity for College of Horticulture, Bagalkote.** |
| | **Discussion & Resolution :**<br>The Board examined the proposal for purchase of Fermenter-100 liters capacity for College of Horticulture, Bagalkote. After detailed deliberations, Board accorded its approval for the same. Further, Board directed the University to invite the tender in this regard as per the norms of UHS and KTPP Act.<br>**(Action : Director of Research/Estate Officer)** |
| ಕಾರ್ಯಸೂಚಿ ಸಂ. 21 | ದಿನಾಂಕ 27-08-2019 ರಂದು ಜರುಗಿದ ತೋವಿವಿ, ಬಾಗಲಕೋಟೆಯ ಹಣಕಾಸು ಸಮಿತಿಯ 22ನೇ ಸಭೆಯ ನಡಾವಳಿಗಳ ಅನುಮೋದನೆ ಕುರಿತು. |
| | **ಚರ್ಚೆ ಮತ್ತು ಠರಾವು :**<br>ದಿನಾಂಕ 27-08-2019 ರಂದು ಜರುಗಿದ ಹಣಕಾಸು ಸಮಿತಿಯ 22ನೇ ಸಭೆಯ ನಡುವಳಿಗಳನ್ನು ಮಂಡಳಿಯು ಸುದೀರ್ಘವಾಗಿ ಚರ್ಚಿಸಿ ಸದರಿ ನಡುವಳಿಗಳಿಗೆ ತನ್ನ ಅನುಮೋದನೆ ನೀಡಿತು. ಮುಂದುವರೆದು, ಮಂಡಳಿಯು ತೋವಿವಿ, ಬಾಗಲಕೋಟದ 22ನೇ ಹಣಕಾಸು ಸಮಿತಿ ಸಭೆಯ ನಡುವಳಿಗಳ ಪ್ರಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು) |

| | |
|---|---|
| **Item No.21** | **Approval for Proceedings of the 22nd Meeting of Finance Committee of UHS, Bagalkote held on 27-08-2019.** |
| | **Discussion & Resolution :**<br>The Board discussed the subject at length and accorded its approval for the proceedings of the 22nd meeting of Finance Committee of UHS, Bagalkot held on 27-08-2019. Further, Board directed the University to take necessary actions as per the proceedings of the 22nd meeting of Finance Committee, UHS, Bagalkote.<br>**(Action : Comptroller)** |
| **ಕಾರ್ಯಸೂಚಿ ಸಂ. 22** | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯ 2018-19ನೇ ಸಾಲಿನ ವಾರ್ಷಿಕ ವರದಿ.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ವಿಶ್ವವಿದ್ಯಾಲಯದ 2018-19ನೇ ಸಾಲಿನ ಕರಡು ವಾರ್ಷಿಕ ವರದಿಯನ್ನು ಪರಿಶೀಲಿಸಿತು, ಮಂಡಳಿಯು ಇದನ್ನು ಮುದ್ರಿಸಲು ತನ್ನ ಅನುಮೋದನೆ ನೀಡಿತು. ಮುಂದುವರೆದು, ಮಂಡಳಿಯು ತೋವಿವಿ ಅಧಿನಿಯಮ 2009 ರ ನಿಯಮ 57 ರ ಪ್ರಕಾರ ವಾರ್ಷಿಕ ವರದಿಗಳನ್ನು ಕರ್ನಾಟಕ ಸರಕಾರಕ್ಕೆ ಜರೂರಾಗಿ ಸಲ್ಲಿಸಲು ವಿಶ್ವವಿದ್ಯಾಲಯಕ್ಕೆ ನಿದೇಶಿಸಿತು.<br>**(ಕ್ರಮ : ಕುಲಸಚಿವರು/ವಿಸ್ತರಣಾ ನಿರ್ದೇಶಕರು)** |
| **Item No.22** | **Annual Report of the University of Horticultural Sciences, Bagalkote for the year 2018-19.** |
| | **Discussion & Resolution :**<br>Board reviewed the draft copy of Annual Report of the University for the year 2018-19. The Board accorded its approval for printing the same. Further, the Board directed the University to submit the Annual Reports to the Government of Karnataka as per Sec.57 of UHS Act-2009 at the earliest.<br>**(Action : Registrar/Director of Extension)** |

| | |
|---|---|
| ಕಾರ್ಯಸೂಚಿ ಸಂ. 23 | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಮುಖ್ಯ ಆವರಣದಲ್ಲಿ **400KWp** ಸಾಮರ್ಥ್ಯವುಳ್ಳ ಗ್ರಿಡ್ ಸಂವಾದಾತ್ಮಕ ಸೌರ ವಿದ್ಯುತ್ ಸ್ಥಾವರ ಮೇಲ್ಛಾವಣಿ ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಕುರಿತು. |
| | ಚರ್ಚೆ ಮತ್ತು ಠರಾವು :<br>ಸುದೀರ್ಘವಾದ ಚರ್ಚೆಯ ನಂತರ, ಮಂಡಳಿಯು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಮುಖ್ಯ ಆವರಣದಲ್ಲಿ 400KWp ಸಾಮರ್ಥ್ಯವುಳ್ಳ ಗ್ರಿಡ್ ಸಂವಾದಾತ್ಮಕ ಸೌರ ವಿದ್ಯುತ್ ಸ್ಥಾವರ ಮೇಲ್ಛಾವಣಿ ಅನುಷ್ಠಾನಗೊಳಿಸಲು ತನ್ನ ಅನುಮೋದನೆ ನೀಡಿತು. ಮುಂದುವರೆದು, ಮಂಡಳಿಯು, ಈ ಉದ್ದೇಶಕ್ಕಾಗಿ ನಬಾರ್ಡ್‌ನಿಂದ ಅನುದಾನವನ್ನು ತರಲು ಪ್ರಯತ್ನ ಮಾಡಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. ಗೌರವಾನ್ವಿತ ಸದಸ್ಯರಾದ ಶ್ರೀ ಬಿ. ವೆಂಕಟೇಶ, ತೋಟಗಾರಿಕೆ ನಿರ್ದೇಶಕರು ಇವರು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಮುಖ್ಯ ಆವರಣದಲ್ಲಿ 400KWp ಸಾಮರ್ಥ್ಯವುಳ್ಳ ಗ್ರಿಡ್ ಸಂವಾದಾತ್ಮಕ ಸೌರ ವಿದ್ಯುತ್ ಸ್ಥಾವರ ಮೇಲ್ಛಾವಣಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳುವ ಕುರಿತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರಿಗೆ ಪರಿಶೀಲನೆಗಾಗಿ ಪ್ರಸ್ತಾವನೆಯನ್ನು ಕಳುಹಿಸಲು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿದರು.<br>(ಕ್ರಮ : ಆಸ್ತಿ ಅಧಿಕಾರಿಗಳು) |
| **Item No.23** | **Installation of 400 KWp Grid Interactive Solar Rooftop Power Plant at UHS, Bagalkote.** |
| | **Discussion & Resolution :**<br>This item was deliberated in detail by the Board. The Board accorded its approval for Installation of 400 KWp Grid Interactive Solar Rooftop Power Plant at UHS, Bagalkote. Further, Board directed the University to make efforts to mobilize the resources from the NABARD for this purpose. Hon'ble Member Sri. B. Venkatesh, Director of Horticulture, Department of Horticulture, GOK suggested the University to send the proposal to Karnataka Renewable Energy Development Ltd., Bengaluru for vetting, so as to finalize the issues regarding Installation of 400 KWp Grid Interactive Solar Rooftop Power Plant at UHS, Bagalkote,<br>**(Action : Estate Officer)** |

| ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳ ಚರ್ಚೆಗಳು<br>**Any other discussions with permission of the Chair** | |
|---|---|
| **1.** | ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲರವರು, ಡಾ. ಅಶೋಕ ಆಲೂರ ಇವರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಿ, ಸದರಿಯವರು ಕೃತಿಚೌರ್ಯವನ್ನು ಮಾಡಿದ್ದಾರೆ ಎಂದು ಆರೋಪಿಸಿದರು. ಇದಕ್ಕೆ, ಅಧ್ಯಕ್ಷರು, ಇದು ವಿಶ್ವವಿದ್ಯಾಲಯಕ್ಕೆ ಕೆಟ್ಟ ಹೆಸರು ಹಾಗೂ ಸಂಬಂಧಪಟ್ಟ ಶಿಕ್ಷಕರು/ವಿಜ್ಞಾನಿಗಳಿಗೆ ಇಂತಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಂತೆ ಎಚ್ಚರಿಕೆ ನೀಡಲಾಗಿದೆ ಎಂದು ತಿಳಿಸಿದರು. ಸದರಿಯವರಿಗೆ ಆಂಧ್ರ ಪ್ರದೇಶದ ಖಾಸಗಿ ವಿಶ್ವವಿದ್ಯಾಲಯ ಆದ ಬಿ.ಇ.ಎಸ್.ಟಿ.ಐ., ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡಿರುವ ವಿಷಯಕ್ಕೆ ಸ್ಪಷ್ಟೀಕರಣವನ್ನು ಕೇಳಿದರು. ಮುಂದುವರೆದು, ಸದಸ್ಯರು, ಇದನ್ನು ಯಾವ ರಾಜ್ಯ ಸರ್ಕಾರವು ಜಾರಿಗೆ ತಂದಿರುವುದಿಲ್ಲ, ಖಾಸಗಿ ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡುವ ಕುರಿತು ವಿಶ್ವವಿದ್ಯಾಲಯದ ಅಭಿಪ್ರಾಯವನ್ನು ಕೇಳಿದರು. ಮುಂದುವರೆದು, ಅಧ್ಯಕ್ಷರು, ಮೂರು ವರ್ಷಗಳ ಹಕ್ಕುದಾರ ಅವಧಿಗೆ ಉನ್ನತ ಹುದ್ದೆಗಾಗಿ ಸಮುಚ್ಚಿತ ಮಾರ್ಗದ ಮುಖಾಂತರ ಅರ್ಜಿ ಸಲ್ಲಿಸಿದ್ದಾರೆ, ಈ ಕುರಿತು ಕರ್ನಾಟಕ ನಾಗರೀಕ ಸೇವ ನಿಯಮಗಳಲ್ಲಿ ಅವಕಾಶವಿದೆ. |
| **1.** | Hon'ble Member Dr. Y. B. Patil, expressed his concern regarding the issues related to Dr. Ashok Alur, who has been alleged of indulging in plagiarism. In this regard, Chairman told that, concerned teachers/scientists have been warned not to indulge such activities, which brings disgrace to the University. The member also sought the clarification regarding the issue related to his relief to B.E.S.T.I. University in Andra Pradesh, which is considered to be a private university. Further, Member also sought the opinion of the University for relieving him to a private University, which has not been enacted by the respective state Government. In continuation of this, Chairman informed that, he has applied through Proper Channel for higher post for an lien period of three years for which a provision is there in KCSR. |
| **2.** | ಗೌರವಾನ್ವಿತ ಸದಸ್ಯರಾದ ಶ್ರೀ ಆರ್. ಎಂ. ನಾಗೇಶ ಇವರು ಸೆಪ್ಟಂಬರ್, 2019 ರಲ್ಲಿ ಬಡ್ತಿ ಪಡೆದ ಸೇವಾ ಸಿಬ್ಬಂದಿಯಿಂದ ಕುಲಪತಿಗಳು ಪ್ರತಿಯೊಬ್ಬರಿಂದ ರೂ. 2.00 ಲಕ್ಷ ಲಂಚ ಪಡೆದಿದ್ದಾರೆ ಎಂದು ಆರೋಪಿಸಿದರು. ಗೌರವಾನ್ವಿತ ಕುಲಪತಿಗಳು ಆರೋಪವನ್ನು ನಿರಾಕರಿಸುತ್ತಾ, ಸದಸ್ಯರು ಇದಕ್ಕೆ ಪುರಾವೆ ಒದಗಿಸಬೇಕು ಎಂದು ಸ್ಪಷ್ಟವಾಗಿ ಹೇಳಿದರು, ಇಲ್ಲದಿದ್ದರೆ, ಈ ಹೇಳಿಕೆಯನ್ನು ಅನೂರ್ಜಿತವೆಂದು ಪರಿಗಣಿಸಲಾಗುವುದು ಎಂದು ತಿಳಿಸಿದರು. |

| | |
|---|---|
| **2.** | Hon'ble Member Sri. R. M. Nagesh alleged the Hon'ble Vice-Chancellor with regard to taking bribe to the extent of 2.00 lakh each from Service Personnel, who have been promoted during September, 2019. Hon'ble Vice-Chancellor denying the allegations categorically stated that, the member has to provide the proof. Otherwise, this statement will be treated as null and void. |
| **3** | ಸಸ್ಯ ರೋಗಶಾಸ್ತ್ರ, ಕೀಟಶಾಸ್ತ್ರ ಮತ್ತು ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಕಾರ್ಯಕ್ರಮದ ನಾಮಕರಣದ ಕುರಿತು ಚರ್ಚೆ ನಡೆಯಿತು. ಇದಕ್ಕೆ, ಸದರಿ ವಿಷಯಗಳ ವಿದ್ಯಾರ್ಥಿಗಳ ಅಭದ್ರತೆಯ ಭಾವನೆಗಳ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಆದ್ದರಿಂದ, ಈ ಬಿಕ್ಕಟ್ಟನ್ನು ನಿವಾರಿಸಲು ವಿಶ್ವವಿದ್ಯಾಲಯ ಪರಿಹಾರ / ಶಿಫಾರಸ್ಸುಗಳನ್ನು ತರಲು ಸಲಹೆ ನೀಡಿದರು. |
| **3** | There was a discussion on the issue of nomenclature of Master Degree programme in Plant Pathology, Entomology and Soil Sciences & Agricultural Chemistry. In this regard, the Secretary to Government expressed his concern about the insecurity feelings of the students in the above subjects. Hence, he advised the University to come up with solutions / recommendations, so as to address this impasse. |
| **4** | ಡಾ. ವೈ. ಬಿ. ಪಾಟೀಲ, ಗೌರವಾನ್ವಿತ ಸದಸ್ಯರು ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಬೇಕಾದ ಒಬ್ಬ ವ್ಯಕ್ತಿಗೆ ಒಂದು ಹುದ್ದೆ ಪದ್ಧತಿಯ ವಿಷಯವನ್ನು ಎತ್ತಿದರು. ಒಬ್ಬ ವ್ಯಕ್ತಿಗೆ ಒಂದು ಹುದ್ದೆ ತತ್ವವನ್ನು ಅನುಸರಿಸಲು ಅವರು ಒತ್ತಾಯಿಸಿದರು. ಇದರಿಂದಾಗಿ, ಇನ್ನೊಬ್ಬರಿಗೆ ಅಧಿಕಾರ ಮತ್ತು ಇತರೆ ವೃಂದದಲ್ಲಿ ಸೇವೆ ಸಲ್ಲಿಸಲು ಅವಕಾಶ ಸಿಗುತ್ತದೆ. |
| **4** | Dr.Y.B.Patil Hon'ble Member raised the issue of one man one post policy to be adopted in the University. He insisted to follow one man one post principle, so that other will get opportunity to serve in the officer and other cadre. |
| **5** | ಗೌರವಾನ್ವಿತ ಸದಸ್ಯರಾದ ಶ್ರೀ ಚೌಡಾ ರೆಡ್ಡಿ ತೂಪಲ್ಲಿರವರು ತೋಟಗಾರಿಕೆ ಇಲಾಖೆಯನ್ನು ಸ್ಥಾಪಿಸಲು ಹಾಗೂ ಪ್ರಸ್ತುತವಾಗಿ ತೋಟಗಾರಿಕೆ ಮಹಾವಿದ್ಯಾಲಯ ಸ್ಥಾಪನೆಗೊಂಡ ಸ್ಥಳಕ್ಕಾಗಿ ಭೂಮಿಯನ್ನು ಮಂಜೂರು ಮಾಡಲು ದಿವಂಗತ ಶ್ರೀ ಟಿ. ಚನ್ನಯ್ಯ ಇವರು ನೀಡಿದ ಕೊಡುಗೆಯನ್ನು ಸ್ಮರಿಸುವ ಸಲುವಾಗಿ ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ಪ್ರವೇಶ ದ್ವಾರದ ಮುಂದೆ ಸದರಿಯವರ ಭಾವಚಿತ್ರವನ್ನು ಅಳವಡಿಸಲು ಶ್ರೀ ಬಾಲಾಜಿ ಚನ್ನಯ್ಯ ಇವರು ವಿಶ್ವವಿದ್ಯಾಲಯಕ್ಕೆ ನೀಡಿರುವ ಪ್ರಸ್ತಾವನೆಯನ್ನು ಸಭೆಯ ಗಮನಕ್ಕೆ ತಂದರು. ಚರ್ಚೆಗಳ ನಂತರ, ಮಂಡಳಿಯು ದಿವಂಗತ ಶ್ರೀ ಟಿ. |

| | |
|---|---|
| | ಚನ್ನಯ್ಯ ಇವರ ಭಾವಾಚಿತ್ರವನ್ನು ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ಪ್ರವೇಶ ದ್ವಾರದ ಮುಂದೆ ಅಳವಡಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. |
| **5** | Sri R. Chowda Reddy Thoopalli, Hon'ble Member informed the Board about the proposal subjected by **Sri Balaji Chennaiah,** Ex ZP member, Kolar for installation of Photo of Late Sri. T. Chennaiah, at the entrance gate of COH, Kolar in commemoration of his contribution towards sanctioning of land for establishment of Department of Horticulture, wherein present, College of Horticulture has been established. After deliberations, Board directed the University to install the photo of Late Sri. T. Chennaiah, at the entrance gate of COH, Kolar. |
| **6** | ವ್ಯವಸ್ಥಾಪನಾ ಮಂಡಳಿ ಅಧಿಕಾರೇತರ ಸದಸ್ಯರುಗಳಿಗೆ ವಿದೇಶಿ ಅಧ್ಯಯನ ಪ್ರವಾಸವನ್ನು ಮಂಡಳಿಯ ಅನುಮೋದಿಸಿತು. ಅದರಂತೆ, ಸದರಿ ಪ್ರವಾಸವನ್ನು ಪ್ರಾಯೋಜಿಸಲು GIZ ಪ್ರಾಧಿಕಾರವನ್ನು ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಸಂಪರ್ಕಿಸಿದರು. ಇದಕ್ಕೆ, GIZ ಪ್ರಾಧಿಕಾರವು ಈ ಅವಧಿಯಲ್ಲಿ ಪ್ರತಿಕೂಲ ಹವಾಮಾನದಿಂದಾಗಿ ಡಿಸೆಂಬರ್, 2019 ರ ಬದಲು ಎಪ್ರಿಲ್ – 2020 ರ ಅವಧಿಯಲ್ಲಿ ಪ್ರವಾಸವನ್ನು ಪ್ರಾಯೋಜಿಸಲು ಒಪ್ಪಿದೆ. ಮುಂದುವರೆದು, ಕೆಲವು ಅಧಿಕಾರೇತರ ಸದಸ್ಯರುಗಳು ವಿಶ್ವವಿದ್ಯಾಲಯದ ಅನುದಾನವನ್ನು ಬಳಸಿಕೊಂಡು 2019 ರ ಡಿಸೆಂಬರ್‌ನಲ್ಲಿ ವಿಯೆಟ್ನಾಂ ಏಷ್ಯನ್ ದೇಶಗಳಿಗೆ ಅಧ್ಯಯನ ಪ್ರವಾಸವನ್ನು ಕೈಗೊಳ್ಳಲು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಧ್ಯಕ್ಷರು, ವಿಶ್ವವಿದ್ಯಾಲಯದ ಅನುದಾನದ ಲಭ್ಯತೆಯನ್ನು ಅವಲಂಬಿಸಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದರು, ಇದಕ್ಕೆ, ಕಾರ್ಯದರ್ಶಿಯವರು ಅನುಮತಿಗಾಗಿ ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br>**(ಕ್ರಮ: ಕುಲಸಚಿವರು)** |
| **6** | The Foreign Study Tour to the non-official members of BOM was approved by the Board. Accordingly, GIZ Authority was pursued by the Secretariat, Department of Horticulture, GOK to sponsor the aforesaid Tour. GIZ has agreed to sponsor the same during April-2020 instead of December-2019 due to inclement weather during this period. Further, some of the non-official members expressed their opinion, to have this Study Tour to Asian Countries like Vietnam during December, 2019 by utilizing the University Grant. Chairman, informed |

| | |
|---|---|
| | that the, the proposal will be examined depend upon the availability of University grants for which Secretary suggested the University to send proposal to the Government of Karnataka for permission.<br>**(Action: Registrar)** |
| **7** | ಗೌರವಾನ್ವಿತ ಕೆಲವು ಸದಸ್ಯರು ವಿಶ್ವವಿದ್ಯಾಲಯದಲ್ಲಿ ವಿವಿಧ ಉಪ ಸಮಿತಿಗಳನ್ನು ರಚಿಸುವಂತೆ ಒತ್ತಾಯಿಸಿದರು. ದಿನಾಂಕ 27.10.2018 ರ ಅನುಸಾರ ಸರ್ಕಾರದ ನಿರ್ದೇಶನದಂತೆ ಇಂತಹ ಸಮಿತಿಗಳನ್ನು ರಚಿಸಲು ಯಾವುದೇ ಅವಕಾಶವಿಲ್ಲ ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು. |
| **7** | Some of the Hon'ble members insisted to form various sub-committees in the University. Chairman informed that, there is no provision for formation of such committees as per directions of the Government vides dated 27.10.2018. |
| **8** | ಗೌರವಾನ್ವಿತ ಸದಸ್ಯರಾದ ಶ್ರೀ ಆರ್. ಎಂ. ನಾಗೇಶ ಅವರು ವಿಶ್ವವಿದ್ಯಾಲಯದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಒತ್ತಾಯಿಸಿದರು, ಇದಕ್ಕಾಗಿ ವಿಶ್ವವಿದ್ಯಾಲಯವು ಸರ್ಕಾರದಿಂದ ಅನುಮೋದನೆ ಪಡೆಯಲು ಪ್ರಯತ್ನಿಸುತ್ತಿದೆ. |
| **8** | Sri R. M. Nagesh, Hon'ble Member insisted the University to fill-up the backlog posts, for which University is making efforts to get approval from the Government. |

ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The meeting was concluded with the vote of thanks.

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,**
**ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ**
**Registrar & Member Secretary**
**Board of Management, UHS, Bagalkot**